(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No. (C) 4745
ದಿನಾಂಕ Date.....

MYSORE LEGISLATIVE ASSEMBLY

THIRTEENTH DAY.

Wednesday, 12th March 1958.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS.

Starting of Girls' High School at Chikmagalur.

Q.—1158. Sri A. M. BASAVE GOWDA (Chikmagalur).—

Will the Government be pleased to state:—

whether it is under their contemplation to start a Government Girls' High School at Chikmagalur Town?

A.—Sri V. VENKATAPPA (Minister for Education).—

No.

Sri A. M. BASAVE GOWDA.—Are the Government aware that the number of girl students is on the increase in Chickmagalur?

Sri V. VENKATAPPA.—No.

Sri A. M. BASAVE GOWDA.—Are the Government aware that when the Chief Minister along with the Deputy Minister visited this Town, he promised to grant a Girls High School for Chikmagalur this year alone?

Sri V. VENKATAPPA.—I do not know. It has not come to my notice.

Sri A. M BASAVE GOWDA.—If it is brought to your notice, what action do you propose to take?

ಶ್ರೀ ವಿ. ವೆಂಕಟಪ್ಪ.—ನಾನು ಅಲ್ಲಿಗೆ ಹೋದಾಗ ಅದನ್ನು ನನ್ನ ಗಮನಕ್ಕೆ ತಂದರು. ಅಲ್ಲೊಂದು ಖಾಸಗಿ ಹೈಸ್ಕೂಲಿದೆ. ಅಲ್ಲಿ ಫೀಜು ಜಾಸ್ತಿ ಎಂದು ಕೆಲವರು ಅಲ್ಲಿಗೆ ಹೋಗುವುದಿಲ್ಲವೆಂದು ಹೇಳುತ್ತಾರೆ. ಅದನ್ನು ವಿಚಾರಮಾಡಿ, ಎಷ್ಟು ಬಾಲಕಿಯರು ಇದ್ದಾರೆ, ಅವರಿಗೆ ಸಾಕಾದಷ್ಟು ಅವಕಾಶವಿದೆಯೆ ಎಂಬುದನ್ನು ಪರಿಶೀಲಿಸಿ ಎಂದು ಸಂಬಂಧಪಟ್ಟವರಿಗೆ ಹೇಳಿದೆ. ಇನ್ನೂ ಅವರಿಂದ ವರದಿ ಬಂದಿಲ್ಲ.

Sri C. J. MUCKANNAPPA.—May I know the strength of the girl students in the private High School at Chikmagalur?

Sri V. VENKATAPPA.—I have already said that I did not know.

ಶ್ರೀ ಜಿ. ಶಿವಪ್ಪ.—ಎರ್ಕಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲೂ ಸರ್ಕಾರಿ ಹೈಸ್ಕೂಲನ್ನು ತೆರೆದು ಚಿಕ್ಕಮಗಳೂರು ಡಿಸ್ಟ್ರಿಕ್ಟಿನಲ್ಲಿ ತೆರೆಯದಿರುವುದಕ್ಕೆ ಕಾರಣವೇನು?

ಶ್ರೀ ವಿ. ವೆಂಕಟಪ್ಪ.—ಅಲ್ಲಿ ಖಾಸಗಿ ಹೈಸ್ಕೂಲು ಬಾಲಕಿಯರಿಗಾಗಿ ಇದೆ. ಅದರಲ್ಲಿ ಸಾಕಷ್ಟು ಹುಡುಗಿಯರಿರಲಿಲ್ಲ, ಈಗ ಸ್ವಲ್ಪ ಹೆಚ್ಚು ಮಂದಿ ಬರುತ್ತಿದ್ದಾರೆ ಎಂದು ಹೇಳುತ್ತಾರೆ. ಆ ಸ್ಕೂಲಿನಲ್ಲಿ ಸ್ಥಳ ಸಾಕಷ್ಟಿದೆಯೆ ಎಂಬುದನ್ನೂ, ಫೀಜು ಹೆಚ್ಚಾಗಿದೆಯೆ ಎಂಬುದನ್ನೂ ಪರಿಶೀಲಿಸಿ ಎಂದು ತಿಳಿಸಿದೆ.

ಶ್ರೀ ಕೆ. ಕೆಂಚಪ್ಪ.—ತಾವು ಪ್ರಶ್ನೆಗೆ ಸರಿಯಾಗಿ ಉತ್ತರ ಹೇಳುತ್ತಿದ್ದಿರೋ ಅಥವಾ ತರಿಸಿರುವ ಉತ್ತರವನ್ನು ಓದಿಹೇಳುತ್ತಿದ್ದೀರೋ? ಸರಿಯಾದ ಉತ್ತರ ಕೊಡುತ್ತಿಲ್ಲ.

ಅಧ್ಯಕ್ಷರು.—ಅವರು ಉಪಪ್ರಶ್ನೆಗೆ ಉತ್ತರ ಹೇಳಿದ್ದಾರೆ, ಅಷ್ಟೆ.

Sri C. K. RAJAIAH SHETTY.—Is it a Government Aided High School?

ಶ್ರೀ ವಿ. ವೆಂಕಟಪ್ಪ.—ಗ್ರಾಂಟು ಕೊಡುತ್ತಾರೆ.

Sri C. K. RAJAIAH SHETTY.—Then is it not necessary that there should be a uniform policy even in levying fees?

ಶ್ರೀ ವಿ. ವೆಂಕಟಪ್ಪ.—ಇಲ್ಲ, ಸ್ವಲ್ಪ ಹೆಚ್ಚು ಧಾರ್ಜ ಮಾಡಬಹುದು. ಅದನ್ನು ರೆಪ್ರಸೆಂಟ್ ಮಾಡಿದ್ದಾರೆ. ಆ ವಿಚಾರ ಪರಿಶೀಲಿಸಿ ಇರುವ ಸ್ಕೂಲನ್ನು ದೊಡ್ಡದು ಮಾಡಬೇಕೇ ಅಥವಾ ಹೊಸದಾಗಿ ಪ್ರಾರಂಭಿಸಬೇಕೇ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಡಿ. ಎಚ್. ರುದ್ರಪ್ಪ.—ಬಹಳ ದಿವಸಗಳಿಂದ ಮಲೆನಾಡಿನಲ್ಲಿ ಹೈಸ್ಕೂಲ್‌ಲ್ಲವೆಂದು ಆ ಡಿಸ್ಟ್ರಿಕ್ಟಿನವರು ಕೇಳುತ್ತಿಲ್ಲವೆ?

ಶ್ರೀ ವಿ. ವೆಂಕಟಪ್ಪ.—ಕೇಳುತ್ತಿದ್ದಾರೆಂದು ಆಗಲೇ ಹೇಳಿದೆ.

ಶ್ರೀ ಡಿ. ಎಚ್. ರುದ್ರಪ್ಪ.—ಹಾಗಾದರೆ ಈ ವರ್ಷವಾದರೂ ಸ್ಕೂಲನ್ನು ಪ್ರಾರಂಭಿಸುತ್ತೀರಾ?

ಶ್ರೀ ವಿ. ವೆಂಕಟಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ.

Sri Y. VEERAPPA.—Is it not the policy of Government to keep the fee scale in the private or aided high school on par with the fee scale in the Government high school ?

Sri V. VENKATAPPA.—It is not the policy. They have been allowed to collect any fees.

ಶ್ರೀ ಬಿ. ಎಚ್. ಬೋರಣ್ಣಗೌಡ.—ಬಡ ಹುಡುಗಿಯರು ಸರ್ಕಾರಿ ಶಾಲೆಯಲ್ಲಿ ಕೊಡಬೇಕಾದ ಫೀಜಿಗಿಂತ ಹೆಚ್ಚು ಫೀಜನ್ನು ಖಾಸಗಿ ಸ್ಕೂಲಿನಲ್ಲಿ ಕೊಡಬೇಕಾಗಿರುವುದರಿಂದ ಅವರು ಖಾಸಗಿ ಸ್ಕೂಲಿಗೆ ಹೋಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ವಿ. ವೆಂಕಟಪ್ಪ.—ಖಾಸಗಿ ಹೈಸ್ಕೂಲಿನಲ್ಲೇ ಬೇಕಾದ ಅನೂಕೂಲ ಮಾಡಿಕೊಟ್ಟರೆ ಪರವಾಗಿಲ್ಲವೆಂದು ಮನವಿ ಮಾಡಿರುವುದರಿಂದ ಆ ವಿಚಾರವನ್ನು ಪರಿಶೀಲಿಸುತ್ತಿದ್ದೇವೆ. ಅದನ್ನು ವಿಸ್ತರಿಸೋಣವೆ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸರ್ಕಾರದವರು ಶಾಲೆಯನ್ನು ತೆರೆಯಬೇಕಾದರೆ ಎಷ್ಟು ಹೆಣ್ಣುಮಕ್ಕಳು ಶಾಲೆಗೆ ಬರಬೇಕು ?

ಶ್ರೀ ವಿ. ವೆಂಕಟಪ್ಪ.—ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ, ಸಾಧಾರಣವಾಗಿ ಮೊದಲನೆಯ ವರ್ಷಕ್ಕೆ 50 ಹುಡುಗರಾದರೂ ಬರಬೇಕು.

ಶ್ರೀ ಬಿ. ಎಚ್. ಬೊರಣ್ಣಗೌಡ.—ಚಿಕ್ಕಮಗಳೂರು ಕಾರ್ವೆಂಟ್ ಸ್ಕೂಲಿನಿಂದ ಈ ದಿವನ 150 ಹುಡುಗರು ಪರೀಕ್ಷೆಗೆ ಹೋಗುವುದು ಸರ್ಕಾರದ ಅವಹಾಹನೆಗೆ ಬಂದಿದೆಯೆ ?

ಶ್ರೀ ವಿ. ವೆಂಕಟಪ್ಪ.—ಇರಬಹುದು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹಾಗಿರುವಾಗ ಸಾಕಾದಷ್ಟು ಹುಡುಗರಿಲ್ಲವೆಂದು ಹೇಗೆ ಭಾವಿಸಿರಾಯಿತು ?

ಶ್ರೀ ವಿ. ವೆಂಕಟಪ್ಪ.—ನಾನು ಹಾಗೆ ಹೇಳಲಿಲ್ಲ.

Sri U. M. MADAPPA.—Is it not a fact that in accordance with the grant-in-aid rules that are prevailing throughout the country the aided schools are permitted to raise the fee more than the prescribed limit ?

ಶ್ರೀ ವಿ. ವೆಂಕಟಪ್ಪ.—ಅವರು ಸ್ವಲ್ಪ ಹೆಚ್ಚಿಗೆ ವಸೂಲು ಮಾಡಬಹುದೆಂದು ಕೆಲವು ಕಡೆಯಲ್ಲಿದೆ.

Proposals by Lamani Tanda for the Registration of Housing Societies in Gadag and Mundargi Petth.

Q.—1165. Sri C. S. HULKOTI (Mundargi).—

Will the Government be pleased to state :—

(*a*) the number of Lamani Tandas in Mundargi Petth and Gadag Taluk that have sent proposals for the registration of Housing Societies under the Co-operative Societies Act ;

(*b*) the proposals that have been accepted and the names of societies that have registered ;

(*c*) whether there are any proposals for registration still under consideration of the Government ?

A.—Sri S. NIJALINGAPPA (Chief Minister).—

(*a*) Three

(*b*) Two

One Papanashi-Group Co-operative Housing Society No. B-543.

(*c*) Yes.

ಶ್ರೀ ಸಿ. ಎಸ್. ಹುಲುಕೋಟಿ.—ಈ ಮೂರು ಸೊಸೈಟಿಗಳು ರಿಜಿಸ್ಟರ್ ಆಗಬೇಕೆಂದು ಬಂದಿರುವುವು ಯಾವುವು ?

ಶ್ರೀ ಎಂ. ಪಿ. ಪಾಟೀಲ್.—ಸೊಸೈಟಿಗಳ ಹೆಸರು ನನ್ನಲಲ್ಲ.

ಶ್ರೀ ಸಿ. ಎಸ್. ಹುಲುಕೋಟಿ.—ರಿಜಿಸ್ಟರಾಗಿರುವಂಥವು ಎರಡು ಎಂದು ಹೇಳಿದ್ದೀರಿ. ಒಂದರ ಹೆಸರು ಕೊಟ್ಟಿದ್ದೀರಿ, ಇನ್ನೊಂದು ಸೊಸೈಟಿಯು ಯಾವುದು ?

ಶ್ರೀ ಎಂ. ಪಿ. ಪಾಟೀಲ್.—ಇನ್ನೊಂದರ ಹೆಸರು ಗೊತ್ತಿಲ್ಲ.

ಶ್ರೀ ಸಿ. ಎಸ್. ಹುಲುಕೋಟಿ.—ರಿಜಿಸ್ಟರ್ ಮಾಡಿಸಬೇಕೆಂದು ಯಾವಾಗ ಅರ್ಜಿ ಬಂತು ?

ಶ್ರೀ ಎಂ. ಪಿ. ಪಾಟೀಲ್.—5-5-1949ರಲ್ಲಿ.

ಶ್ರೀ ಸಿ. ಎಸ್. ಹುಲುಕೋಟಿ.—ಬಾಕಿ ಎರಡು ಯಾವಾಗ ಬಂದುವು ?

ಶ್ರೀ ಎಂ. ಪಿ. ಪಾಟೀಲ್.—ಎರಡನೆಯದು ಇನ್ನು ರಿಜಿಸ್ಟರ್ ಆಗಿಲ್ಲ. Nomadic Tribes Welfare ಆಫೀಸರಿಗೆ ಕಳುಹಿಸಿದೆ.

ಶ್ರೀ ಸಿ ಎಸ್. ಹುಲುಕೋಟಿ.—ಇನ್ನೊಂದು ರಿಜಿಸ್ಟರ್ ಆಗದೆ ಉಳಿದಿರುವುದಕ್ಕೆ ಕಾರಣವೇನು ?

ಶ್ರೀ ಎಂ. ಪಿ. ಪಾಟೀಲ್.—ಅವರ ಕಾಗದವನ್ನು Nomadic Tribes Welfare Officerಗೆ ಕಳುಹಿಸಿದ್ದು ಇನ್ನೂ ಬಂದಿಲ್ಲ.

ಶ್ರೀ ಸಿ. ಎಸ್. ಹುಲುಕೋಟಿ.—ಆದಷ್ಟು ಜಾಗ್ರತೆ ಮಾಡುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಆದಷ್ಟು ಜಾಗ್ರತೆ ಮಾಡುತ್ತಿದ್ದೇವೆ.

ಒಬ್ಬ ಸದಸ್ಯರು.—ರಿಜಿಸ್ಟರ್ ಮಾಡಿಸಬೇಕೆಂದು ಅರ್ಜಿ ಬಂದ ತಾರೀಖು ಯಾವುದು ?

ಶ್ರೀ ಎಂ. ಪಿ. ಪಾಟೀಲ್.—ತಾರೀಖು ಈಗ ನನ್ನಲ್ಲಿಲ್ಲ.

ಒಬ್ಬ ಸದಸ್ಯರು.—ಸೊಸೈಟಿಯ ಹೆಸರೇ ಗೊತ್ತಿಲ್ಲದೆ, ವಿಷಯಗಳನ್ನು ಹೇಗೆ ತರಿಸಿಕೊಳ್ಳುತ್ತೀರಿ ?

ಶ್ರೀ ಎಂ. ಪಿ. ಪಾಟೀಲ್.—ಹೆಸರುಗಳನ್ನು ಕೊಟ್ಟ ತಕ್ಷಣ ಸೊಸೈಟಿಗಳು ಕೆಲಸಮಾಡುತ್ತಿವೆ.